ಅಧ್ಯಕ್ಷರು.—ಈ ವಿಚಾರ ಅಷ್ಟು ಮಹತ್ವದ್ದು ಇದ್ದರೆ ನಾವು ನೀವು ಸ್ಪೆಷಲ್ ಆಗಿ ಕೂತು ಮಾತನಾಡೋಣ. ಮಾನ್ಯ ಸದಸ್ಯರು ನನ್ನ ಚೇಂಬರ್‌ಗೆ ಬರಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸದಸ್ಯರನ್ನೊಳಗೊಂಡಂತೆ ಎಲ್ಲರೂ ಆರೆಸ್ಟ್ ಆಗತಕ್ಕಂಥ ಸಂದರ್ಭವಿರುತ್ತದೆ. ಅವರೆಲ್ಲರ ಸುತ್ತಲೂ ಪೋಲೀಸ್‌ನವರ ಸರ್ಪ ಕಾವಲನ್ನು ಹಾಕಿರುತ್ತಾರೆ. ಅವರೆಲ್ಲರೂ ಕೂಡ ಜೈಲಿಗೆ ಹೋಗುತ್ತಿದ್ದಾರೆ. ಇದು ಒಂದು ಗಂಭೀರವಾದ ವಿಷಯವಾಗಿರುತ್ತದೆ. ಎಂಥೆಂಥದ್ದೊ ಸಣ್ಣ ಸಣ್ಣ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುತ್ತೇವೆ. ಇದು ಸಾಮಾನ್ಯ ಜನಕ್ಕೆ ಸಂಬಂಧಪಟ್ಟ. ಅದರಲ್ಲೂ ಕೂಲಿಕಾರರಿಗೆ ಸಂಬಂಧಪಟ್ಟ ವಿಷಯವಾಗಿರುತ್ತದೆ. ಅಂಥವರ ಪ್ರಶ್ನೆ ಬಂದಾಗ ಏನು ಮಾಡದೆ ಇದ್ದರೆ ಹೇಗೆ ? ಅದಕ್ಕೋಸ್ಕರವಾಗಿ ನೋಟೀಸ್ ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.—ಯೋಚನೆ ಮಾಡುತ್ತೇನೆ. ನಾಳೆ ನಾಡಿದ್ದು ವಿಚಾರ ಮಾಡೋಣವೆಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶಾಸನ ಕಾರ್ಯಕಲಾಪಗಳು

1) ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕ, 1985 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಸಹಕಾರಿ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೆ, 1985ರ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ 1985ರ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರ ಸಚಿವರು ಮಾನ್ಯ ಸಹಕಾರಿ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೇ, 1985ರ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.—

2. ಕರ್ನಾಟಕ ಅಗತ್ಯ ವಸ್ತುಗಳ (ನಿಯಂತ್ರಣ) ವಿಧೇಯಕ, 1985. ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಸಿದ್ಧರಾಮಯ್ಯ (ಪಶು ಸಂಗೋಪನಾ ಹಾಗೂ ಪಶುವೈದ್ಯ ರಾಜ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, 1985ರ ಕರ್ನಾಟಕ ಅವಶ್ಯಕ ವಸ್ತುಗಳ (ನಿಯಂತ್ರಣ) ವಿಧೇಯಕವನ್ನು, ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ '1985ರ ಕರ್ನಾಟಕ ಅವಶ್ಯಕ ವಸ್ತುಗಳ (ನಿಯಂತ್ರಣ) ವಿಧೇಯಕವನ್ನು ಸಭೆಯ ಮುಂದೆ ಇಡಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ವಿತ್ತೀಯ ಕಾರ್ಯಕಲಾಪಗಳು

1985-86ನೇ ಸಾಲಿನ ಸಂಬಂಧಿಸಿದ ಬೇಡಿಕೆಗಳ ಮೇಲಿನ ಚರ್ಚೆ

ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಸನ್ಮಾನ್ಯ ಅಧ್ಯಕ್ಷರೇ, 1985-89ನೇ ಸಾಲಿನ ಈ ಆಯವ್ಯಯವನ್ನು ಮಾನ್ಯ ಆರ್ಥಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಕರ್ನಾಟಕ ರಾಜ್ಯದ ವಿವಿಧ ವರ್ಗಗಳು ಏನಿವೆ, ಅವರು ಹಿಂದುಳಿದವರಾಗಿರಬಹುದು, ಹರಿಜನರಾಗಿರಬಹುದು ಅಥವಾ ಯಾರು ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿರತಕ್ಕಂಥ ಜನ ಇದ್ದಾರೆ ಅವರೆಲ್ಲರ ಕಲ್ಯಾಣ ಸಾಧನೆ ಮಾಡತಕ್ಕಂಥಾದ್ದರ ಪ್ರತಿಪಾದಿಸುವ ಕನ್ನಡಿಯಂತೆ ಇರತಕ್ಕಂಥ ಈ ಆಯವ್ಯಯ

ANNEXURE